ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತಮೂರನೆಯ ಅಧಿವೇಶನ

ಗುರುವಾರ, ದಿನಾಂಕ: 4ನೇ ಫೆಬ್ರುವರಿ, 2021

ತನಿಖಾಧಿಕಾರಿಗಳ ನ್ಯೂನತೆ ಮತ್ತು ಅಭಿಯೋಜಕರ ನಿರ್ಲಕ್ಷ್ಯತೆಯಿಂದ ಖುಲಾಸೆಯಾಗುತ್ತಿರುವ ಬಗ್ಗೆ

ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

388 (406) ಮಾನ್ಯ ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳೆದ ಮೂರು ವರ್ಷಗಳಲ್ಲಿ ಖುಲಾಸೆ ಸಮಿತಿಯು ತನಿಖಾಧಿಕಾರಿಗಳ ನ್ಯೂನತೆ ಮತ್ತು ಅಭಿಯೋಜಕರ ನಿರ್ಲಕ್ಷ್ಯತೆಯಿಂದ ಖುಲಾಸೆಗೊಂಡ ಪ್ರಕರಣಗಳ ಬಗ್ಗೆ ವರದಿ ನೀಡಿದೆಯೇ;

(ಆ) ಖುಲಾಸೆಗೊಂಡ ನಂತರ ಎಷ್ಟು ತಿಂಗಳಲ್ಲಿ ವರದಿ ನೀಡಬೇಕು; (ಕಾಲಮಿತಿಯ ವಿವರ ನೀಡುವುದು) ಖುಲಾಸೆ ಸಮಿತಿ ವರದಿ ನೀಡಿದ ನಂತರ ಎಷ್ಟು ಅವಧಿಯಲ್ಲಿ ಶಿಸ್ತು ಕ್ರಮಕ್ಕೆ ಆದೇಶಿಸಲಾಗುತ್ತದೆ; (ಕಾಲಮಿತಿಯ ವಿವರ ನೀಡುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ಈ ಖುಲಾಸೆ ಸಮಿತಿಯ ವರದಿಯನ್ವಯ ತೆಗೆದುಕೊಂಡ ಶಿಸ್ತುಕ್ರಮಗಳೇನು? (ವಿವರಗಳನ್ನು ನೀಡುವುದು)